

ಕೊಟ್ಟರು? ಅಥವಾ ಕೊಡುತ್ತಿದ್ದರು? ಎಂದೆಲ್ಲ ನಮ್ಮ ನಿಮ್ಮಲ್ಲಿ ಪ್ರಶ್ನೆಗಳು ಉದ್ಭವವಾಗಬಹುದು. ಅವನು ತನ್ನ ಲೋಕಾನುಭವದಿಂದ ಹೀಗೆ ಹೇಳಿದ್ದಾನೆಯೇ ಹೊರತು, ಬೇರೆ ದೃಷ್ಟಿಯಿಂದಲ್ಲ ಅಂತ ನಾವಾದರೂ ಅರ್ಥೈಸಬಹುದು. ಇದೇ ರೀತಿ ಆಂಗ್ಲ ನಾಟಕಕಾರ ಶೇಕ್ಸ್‌ಪಿಯರ್ ನಾಟಕವೊಂದರ ಪಾತ್ರಧಾರಿಯಾದ ಪೊಲೊನಿಯಸ್ ಮೂಲಕ ಮಗನಿಗೆ ಹಿತೋಪದೇಶ ಹೇಳುತ್ತಾ, 'ಸಾಲ ಮಾಡಬೇಡ ಸಾಲ ಕೊಡಬೇಡ' ಎಂದು ಹೇಳಿರುವುದನ್ನು ನೋಡಿದರೆ ಮನುಷ್ಯ ಸಾಲದಿಂದ ಆದಷ್ಟು ದೂರ ಇರುವುದೇ ಮೇಲು ಎಂದೆನಿಸುತ್ತದಲ್ಲವೆ?

ನಮ್ಮ ಗ್ರಾಮೀಣ ಜನರು ಸಾಲದ ದುಷ್ಪರಿಣಾಮಗಳ ಬಗ್ಗೆ ಗಾದೆಗಳ ರೂಪದಲ್ಲೋ, ಒಗಟಿನ ರೂಪದಲ್ಲೋ ಸಾಂದ್ರೀಕರಿಸಿಟ್ಟಿದ್ದಾರೆ. ಇಲ್ಲಿ ನೋಡಿ–'ಸಾಲ ಮಾಡಿ ಓಲೆ ಮಾಡ್ಸಿ, ಓಲೆ ಮಾರಿ ಬಡ್ಡಿ ತೀರ್ಸಿದರು' ಎಂಬ ಈ ಗಾದೆ ನಮಗೆ ಸಾಲದ ನೈಜ ಸ್ವರೂಪವನ್ನು ಬಹು ಮಾರ್ಮಿಕವಾಗಿ ತಿಳಿಸಿಕೊಡುತ್ತದೆ. ಸಾಲ ಮಾಡಿ ಓಲೆ ಮಾಡಿಸುವಾಗ ಇರುವ ಸಡಗರ ಅದನ್ನು ಹಿಂದಿರುಗಿಸುವ ಹೊತ್ತಿಗೆ ನಾಶವಾಗಿರುತ್ತದೆ ಎಂಬುದು ಜನಪದರ ಜೀವನಾನುಭವವೇ ಸರಿ. ಮಾತ್ರವಲ್ಲ, ಸಾಲ ತೀರಿಸುವ ಹೊತ್ತಿಗೆ ಸಾಲಗಾರನಾದವನು ನೆಲ ಕಚ್ಚಿರುತ್ತಾನೆ ಎಂಬುದು ಗಾದೆಯ ಧ್ವನಿತಾರ್ಥವೇ ಆಗಿದೆ. ಸಾಲ ಅಂದರೆ ಬರೀ ಅಸಲಲ್ಲ ಎಂಬ ಸಂಗತಿ ಗೊತ್ತಿರುವ ಸಂಗತಿ. ಬಡ್ಡಿ ಅಂದರೆ ಮಳೆ ಇಲ್ಲದ ಬೆಳೆ. ಈ ಬಡ್ಡಿ ಆಸೆಯಿಂದಲೇ ಅಲ್ಲವೆ ಉಳ್ಳವರು ಸಾಲ ನೀಡುವುದು? ಸಾಲಗಾರನು ತಾನು ಪಡೆದ ಹಣಕ್ಕೆ ನಿಗದಿತ ಕಾಲದಲ್ಲಿ ನಿಗದಿತ ಹಣವನ್ನು ಹೆಚ್ಚುವರಿಯಾಗಿ ಸಾಲಿಗನಿಗೆ ನೀಡುವ ಹಣವನ್ನು ಸ್ಥೂಲವಾಗಿ ಬಡ್ಡಿ ಅನ್ನಬಹುದು. ಅಥವಾ ಸಾಲಿಗನು ಆಪತ್ಕಾಲದಲ್ಲಿ ಹಣ ನೀಡಿ ನೆರವಾದುದಕ್ಕೆ ಕೃತಜ್ಞತಾಪೂರ್ವಕವಾಗಿ ನೀಡುವ ಹೆಚ್ಚುವರಿ ಹಣ ಅಂತ ಕರೆಯಬಹುದಲ್ಲ? ಅಥವಾ ಸಾಲಗಾರನು ನೀಡುವ ಹೆಚ್ಚುವರಿ ಹಣದಿಂದ ಸಾಲಿಗನ ಹಣದ ಗಂಟು ದೊಡ್ಡದಾಗಿ, ಅವನು ನಮಗೆ ನೆರವಾದಂತೆ ಇನ್ನೂ ಕೆಲವರಿಗೆ ನೆರವಾಗಲಿ ಎಂಬ ಸದುದ್ದೇಶದಿಂದ ಕೊಡುವ ಹಣವೆ? ಇಂಥ ಬಡ್ಡಿಯಲ್ಲೂ ಎಷ್ಟೊಂದು ಬಗೆಗಳಿವೆ ಅಂತೀರಿ? ಆಧುನಿಕ ವಂಚಕನ ನಾನಾ